## ಸಂಗೀತಾ ಮತ್ತು ಗ್ಲಾಮರ್ ಗಣಿತ

ಎರಡು ಸಲ ಚಿತ್ರದ ಟ್ರೈಲರ್‌ಗಳನ್ನು ಬಿಡುಗಡೆ ಮಾಡುವ ಮೂಲಕ ಭರ್ಜರಿ ಪ್ರಚಾರ ಪಡೆದಿರುವ 'ಎರಡನೇ ಸಲ' ಸಿನಿಮಾ ತೆರೆ ಕಾಣಲು ಸಿದ್ಧತೆ ನಡೆಸಿದೆ. ಲೆಕ್ಕ ಸರಿಯಾದರೆ, ಮಾರ್ಚ್ ತಿಂಗಳಲ್ಲೇ ಚಿತ್ರ ತೆರೆ ಕಾಣಲಿದೆ.

'ಮಠ' ಗುರುಪ್ರಸಾದ್ ಚಿತ್ರದ ನಿರ್ದೇಶಕರು. ಗುರುಪ್ರಸಾದ್‌ರ ಹಿಂದಿನ ಮೂರು ಸಿನಿಮಾಗಳ ವಿಲಂಬಗತಿ ಈಗಲೂ ಮುಂದುವರೆದಿದೆ. ಧನಂಜಯ್ ಹಾಗೂ ಸಂಗೀತಾ ಭಟ್ 'ಎರಡನೇ ಸಲ' ಚಿತ್ರದ ನಾಯಕ–ನಾಯಕಿ. ಈ ಸಿನಿಮಾ 'ಅಲ್ಲಮ'ದ ಪುಲಕದ ಮುಂದುವರೆದ ರೂಪದಲ್ಲಿ ಧನಂಜಯ್ ಅವರಿಗೆ ಪರಿಣಮಿಸಿದೆ. ಸಂಗೀತಾ ಅವರಂತೂ ಟ್ರೈಲರ್‌ಗಳ ಮೂಲಕವೇ ಜನಪ್ರಿಯತೆಯ ಸುಖ ಅನುಭವಿಸುತ್ತಿದ್ದಾರೆ. 'ಗೋಧಿ ಬಣ್ಣ ಮುದ್ದಾದ ಮೈಕಟ್ಟು' ಎಂದು ಯಾರು ಹೇಳಿದರೂ, ಆ ಮಾತನ್ನು ಪ್ರಶಂಸೆಯ ರೂಪದಲ್ಲಿಯೇ ಸ್ವಾಗತಿಸಬೇಕಾದ ಪರಿಸ್ಥಿತಿ ಅವರಿಗೆ ಸೃಷ್ಟಿಯಾಗಿದೆ.

ಟ್ರೈಲರ್‌ನ ದೃಶ್ಯಗಳು ಸಂಗೀತಾ ಅವರು ಚಿತ್ರದಲ್ಲಿ ಗ್ಲಾಮರಸ್ ಆಗಿ ಕಾಣಿಸಿಕೊಂಡಿರುವ ಸಾಧ್ಯತೆಯನ್ನು ಸೂಚಿಸುವಂತಿವೆ. ಇದನ್ನು ಸಂಗೀತಾ ಅವರೇನೂ ಅಲ್ಲಗಳೆಯುವುದಿಲ್ಲ. 'ಇದರಲ್ಲೇನು ವಿಶೇಷವಿದೆ. ಕಥೆ ಬೇಡುವುದನ್ನು ಪೂರೈಸುವುದು ಕಲಾವಿದರ ಕರ್ತವ್ಯವಲ್ಲವೇ?' ಎನ್ನುವ ಜಾಣ್ಮೆ ಅವರದು. ಮಾಡೆಲಿಂಗ್ ಕ್ಷೇತ್ರದಿಂದ ಬಂದಿರುವ ಅವರು ಗ್ಲಾಮರ್ ಗಣಿತವನ್ನು ಅರಿಯದವರೇನೂ ಅಲ್ಲ.

'ಮಾಮು ಟೀ ಅಂಗಡಿ', 'ಕಿಸ್ಮತ್', 'ಪ್ರೀತಿ ಗೀತಿ ಇತ್ಯಾದಿ' ಚಿತ್ರಗಳಲ್ಲಿ ಸಂಗೀತಾ ಈಗಾಗಲೇ ನಟಿಸಿದ್ದಾರೆ. ಹಿಂದಿನ ಚಿತ್ರಗಳಲ್ಲಿ ದೊರಕದ ಖ್ಯಾತಿ 'ಎರಡನೇ ಸಲ' ಮೂಲಕ ದೊರೆಯುವ ನಿರೀಕ್ಷೆ ಅವರದು. ಹಿರಿಯ ನಟಿ ಲಕ್ಷ್ಮಿ ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರಂತೆ. ಹಾಸ್ಯದ ಜೊತೆಗೆ ಕೌಟುಂಬಿಕ ಭಾವುಕತೆಯೂ ಚಿತ್ರದಲ್ಲಿದೆಯಂತೆ. ಅನೂಪ್ ಸೀಳಿನ್ ಸಂಗೀತ ಹಾಗೂ ಅಶೋಕ್ ಛಾಯಾಗ್ರಹಣ ಚಿತ್ರಕ್ಕಿದೆ.





## 'ಶುದ್ಧಿ'ಯಿಂದ ಸುದ್ದಿ

ಕನ್ನಡ ಚಿತ್ರರಂಗದ ಬೆರಳೆಣಿಕೆಯ ಪ್ರತಿಭಾವಂತ ನಟಿಯರಲ್ಲಿ ನಿವೇದಿತಾ ಒಬ್ಬರು. ಕವಿತಾ ಲಂಕೇಶರ 'ಅವ್ವ' ಚಿತ್ರದ ಸಾವಂತ್ರಿಯ ಪಾತ್ರದ ಮೂಲಕ ಚಿತ್ರರಸಿಕರ ಗಮನಸೆಳೆದಿದ್ದ ಅವರು, ಪುನೀತ್‌ರ 'ಯಾರೇ ಕೂಗಾಡಲಿ' ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದರು. 'ಡಿಸೆಂಬರ್ 1' ನಿವೇದಿತಾ ಪ್ರತಿಭೆಯನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸಿದ ಸಿನಿಮಾ. ರೊಟ್ಟಿ ಮಾರಿ ಸಂಸಾರವನ್ನು ಪೊರೆಯುವ ಉತ್ತರ ಕರ್ನಾಟಕದ ಹೆಣ್ಣುಮಗಳ ಪಾತ್ರದಲ್ಲಿ ಅವರ ನಟನೆ ಗಮನಸೆಳೆಯುವಂತಿತ್ತು. ಹೀಗೆ, ಆಗೊಮ್ಮೆ ಈಗೊಮ್ಮೆ ಗಮನಸೆಳೆಯುವ ಪಾತ್ರಗಳ ಮೂಲಕ ಗಾಂಧಿನಗರದಲ್ಲಿ ಹಾಜರಿ ಹಾಕುವ ನಿವೇದಿತಾ, ಇದೀಗ 'ಶುದ್ಧಿ' ಚಿತ್ರದ ಮೂಲಕ ಸುದ್ದಿಯಲ್ಲಿದ್ದಾರೆ.

ಆದರ್ಶ್ ಎಚ್. ಈಶ್ವರಪ್ಪ ನಿರ್ದೇಶನದ 'ಶುದ್ಧಿ' ಅಂತರಂಗದ ನೈರ್ಮಲ್ಯಕ್ಕೆ ಸಂಬಂಧಿಸಿದ ಕಥೆ ಹೊಂದಿದೆ. ಪುರುಷಕೇಂದ್ರಿತ ಸಮಾಜದಲ್ಲಿ ಹೆಣ್ಣುಮಕ್ಕಳು ಎದುರಿಸುವ ಅಭದ್ರತೆಯ ಕಥೆ ಚಿತ್ರದಲ್ಲಿದೆ. ಪ್ರತಿನಿತ್ಯ ಮಹಿಳಾ ದೌರ್ಜನ್ಯದ ಘಟನೆಗಳು ವರದಿಯಾಗುತ್ತಿರುವ ಸಂದರ್ಭದಲ್ಲಿ, ಅಂತಹುದೇ ಕಥೆಯನ್ನು ದೃಶ್ಯಮಾಧ್ಯಮದ ಮೂಲಕ ಹೇಳಲು 'ಶುದ್ಧಿ' ಹೊರಟಿದೆ. ಗಂಡಸರ ಮನಸ್ಸಿನ ಕೊಳಕನ್ನು ತೊಳೆಯುವುದು ಈ ಚಿತ್ರದ ಉದ್ದೇಶ ಎಂದು ಚಿತ್ರತಂಡ ಹೇಳಿಕೊಂಡಿದೆ.

ಇತ್ತೀಚೆಗಷ್ಟೇ 'ಶುದ್ಧಿ' ಚಿತ್ರದ ಟ್ರೈಲರ್ ಯುಟ್ಯೂಬ್‌ನಲ್ಲಿ ಅನಾವರಣಗೊಂಡಿದೆ. ಭಿನ್ನ ಕಥನ ಹಾಗೂ ಮೇಕಿಂಗ್‌ನಲ್ಲಿನ ಅಚ್ಚುಕಟ್ಟುತನದಿಂದಾಗಿ ಪ್ರೇಕ್ಷಕರ ಗಮನಸೆಳೆದಿರುವ ಈ ಚಿತ್ರ, ಗಾಂಧಿನಗರದಲ್ಲಿ ಹೊಸಹೊಳಿಗೆ ರೂಪಿಸುತ್ತಿರುವ ಪ್ರಯೋಗಶೀಲ ಚಿತ್ರಗಳ ಸಾಲಿಗೆ ಸೇರುವ ತವಕದಲ್ಲಿರುವಂತಿದೆ.

ಆದರ್ಶ್ ನಿರೂಪಿಸಿರುವ ಕಥೆ ನಿವೇದಿತಾ ಅವರಿಗೆ ಇಷ್ಟವಾಗಿದೆ. ಒಂಟಿ ಹೆಣ್ಣನ್ನು ಮಿಕದಂತೆ ಕಾಣುವ ಗಂಡಸರ ಲೋಕದ ಬಗ್ಗೆ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ 'ಶುದ್ಧಿ' ಹೆಚ್ಚು ಪ್ರಸ್ತುತ ಎನ್ನುವ ನಂಬಿಕೆ ಅವರದು.

■ ರಘು